**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,**

**ಶ್ರೀನಿವಾಸಪುರ**

ಸಿ.ಸಿ.ನಂಃ1021/2021

| | | | | |
|---|---|---|---|---|
| 01 | ಹೆಸರು | ಹೆಚ್. ಜಯರಾಮ್ | **CW** | **PW** |
| 02 | ತಂದೆಯ ಹೆಸರು | ಹನುಮಪ್ಪ | 17 | 3 |
| 03 | ವಯಸ್ಸು | 56 ವರ್ಷ | ಪ್ರಮಾಣೀಕರಿಸಲಾದ ದಿನಾಂಕ | |
| 04 | ಉದ್ಯೋಗ | ಪಿ.ಎಸ್.ಐ | 27.01.2024 | |
| 05 | ಊರು | ಶ್ರೀನಿವಾಸಪುರ | | |

**ಮುಖ್ಯ ವಿಚಾರಣೆಃ** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ದಿನಾಂಕಃ 19.07.2019 ರಿಂದ 17.07.2022 ರ ವರೆವಿಗೂ ರಾಯಲ್ಪಾಡು ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕಃ 13.12.2020 ರಂದು ನಾನು ಠಾಣೆಯಲ್ಲಿ ಎಸ್ ಹೆಚ್ ಓ ಕರ್ತವ್ಯದಲ್ಲಿದ್ದಾಗ, ಚಾಸಾ.1 ನೇ ದವರು ನಮ್ಮ ಠಾಣೆಗೆ ಬಂದು ಕೊಟ್ಟ ದೂರನ್ನು ಸ್ವೀಕರಿಸಿ ನಮ್ಮ ಠಾಣಾ ಸಿ.ಆರ್.ನಂ.76/2020 ರಲ್ಲಿ ಆರೋಪಿಯಾದ ಟ್ರಾಕ್ಟರ್ ಚಾಲಕನ ವಿರುದ್ಧ ಐಪಿ ಸಿ ಕಲಂ 279 ಮತ್ತು 304(ಎ) ರಡಿಯಲ್ಲಿ ಮೊಕದಮ್ಮೆ ದಾಖಲಿಸಿಕೊಂಡು, ಪ್ರ. ವಾ. ವ. ಅನ್ನು ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ ಮತ್ತು ಪ್ರತಿಯನ್ನು ಮೇಲಾಧಿಕಾರಿಗಳಿಗೆ ಕಳುಹಿಸಿರುತ್ತೇನೆ. ನಂತರ ಅದೇ ದಿನ ಘಟಣಾ ಸ್ಥಳಕ್ಕೆ ಭೇಟಿ ನೀಡಿ ಪಂಚರಾದ ಚಾಸಾ.3 ಮತ್ತು 4 ನೇ ದವರ ಸಮಕ್ಷಮ ಚಾಸಾ.1 ನೇ ದವರು ತೋರಿಸಿದ ಘಟಣಾ ಜಾಗದ ಪಂಚನಾಮೆಯನ್ನು ಮದ್ಯಾಹ್ನ 12.40 ಗಂಟೆಯಿಂದ 1.30 ಗಂಟೆಯವರೆಗೂ ಜರುಗಿಸಿ, ಅಪಘಾತ ಪಡಿಸಿದ ಟ್ರಾಕ್ಟರ್ ಸಂಖ್ಯೆಃ ಎಪಿ 16 ಟಿ 9468 ಮತ್ತು ಟ್ರಾಲಿ ಸಂಖ್ಯೆಃ ಎಪಿ 16 ಟಿ 8486 ಮತ್ತು ಗಾಯಾಳುವಿನ ಆಟೋ ರಿಕ್ಷ ಸಂಖ್ಯೆಃ ಎಪಿ 39 ಟಿ ಇ 2145 ನೇದನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ಸದರಿ ವಶಕ್ಕೆ ಪಡೆದುಕೊಂಡ ವಾಹನಗಳನ್ನು ಮಾಲು ಪಟ್ಟಿ ಸಂಖ್ಯೆಃ 67/2020 ರಂತೆ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಂತರ ಪಿರ್ಯಾದಿಯ ಮರು ಹೇಳಿಕೆಯನ್ನು ಪಡೆದು ಕಡತಕ್ಕೆ ಅಳವಡಿಕೊಂಡಿರುತ್ತೇನೆ, ಮತ್ತು ಅದೇ ದಿನ ಶವ ತನಿಖೆ ಸಲುವಾಗಿ ಶ್ರೀನಿವಾಸಪುರ ಸರ್ಕಾರಿ

ಆಸ್ಪತ್ರೆಗೆ ಶವವನ್ನು ಸಾಗಿಸಿ ಪಂಚರ ಸಮಕ್ಷಮ ಶವಪಂಚನಾಮೆ ಜರುಗಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಈ ಪ್ರಕರಣವು ಘೋರ ಪ್ರಕರಣ ಆಗಿದ್ದರಿಂದ ಮುಂದಿನ ತನಿಖೆಯ ಸಲುವಾಗಿ ಕಡತವನ್ನು ಚಾಸಾ.18 ದವರು ವಹಿಸಿಕೊಂಡಿರುತ್ತಾರೆ. ಸಾಕ್ಷಿಯು ಪ್ರ.ವಾ.ವ. ವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.8 ಮತ್ತು ಸಾಕ್ಷಿಯ ಸಹಿಯನ್ನು ನಿಪಿ.8(ಎ) ಎಂದು ಗುರುತಿಸಲಾಯಿತು. ದೂರನ್ನು ವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.9 ಮತ್ತು ಸಾಕ್ಷಿಯ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ.1(ಸಿ) ಎಂದು ಗುರುತಿಸಲಾಯಿತು. ಶವಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ಅಪಘಾತ ಪಡಿಸಿದ ಟ್ರಾಕ್ಟರ್ ಮತ್ತು ಟ್ರೇಲರ್ ನ ಭಾವ ಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.4 ರಿಂದ 7 ಎಂದು ಗುರುತಿಸಲಾಗಿರುತ್ತದೆ.

**ಪಾಟೀ ಸವಾಲು ಆರೋಪಿ ಪರ ಶ್ರೀ.ಆರ್.ಆರ್.ಜಿ., ವಕೀಲರಿಂದ:**

ನಾನು ದಿನಾಂಕ: 19.07.2019 ರಿಂದ 17.07.2022 ರ ವರೆವಿಗೂ ರಾಯಲ್ಪಾಡು ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾನು ದಿನಾಂಕ: 13.12.2020 ರಂದು ನಾನು ಠಾಣಾಧಿಕಾರಿಗಳ ಕರ್ತವ್ಯದಲ್ಲಿರಲಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ಆ ದಿನ ಚಾಸಾ.1 ನೇ ದವರು ನಮ್ಮ ಠಾಣೆಗೆ ಬಂದು ಕೊಟ್ಟ ಯಾವುದೇ ದೂರನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾನು ನಮ್ಮ ಠಾಣಾ ಸಿ.ಆರ್.ನಂ.76/2020 ರಲ್ಲಿ ಆರೋಪಿಯಾದ ಟ್ರಾಕ್ಟರ್ ಚಾಲಕನ ವಿರುದ್ಧ ಐಪಿ ಸಿ ಕಲಂ 279 ಮತ್ತು 304(ಎ) ರಡಿಯಲ್ಲಿ ಮೊಕದಮ್ಮೆ ದಾಖಲಿಸಿಕೊಂಡು, ಪ್ರ. ವಾ. ವ. ಅನ್ನು ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ ಮತ್ತು ಪ್ರತಿಯನ್ನು ಮೇಲಾಧಿಕಾರಿಗಳಿಗೆ ಕಳುಹಿಸಿವುದಿಲ್ಲ ಎಂದರೆ ಸರಿಯಲ್ಲ.

ನಾನು ಹೇಳುವಂತೆ ನಾನು ಘಟಣಾ ಸ್ಥಳಕ್ಕೆ ಭೇಟಿ ನೀಡಿ ಪಂಚರಾದ ಚಾಸಾ.3 ಮತ್ತು 4 ನೇ ದವರ ಸಮಕ್ಷಮ ಚಾಸಾ.1 ನೇ ದವರು ತೋರಿಸಿದರು ಎಂದು ಹೇಳುವ ಘಟಣಾ ಜಾಗದಲ್ಲಿ ಯಾವುದೇ ಪಂಚನಾಮೆಯನ್ನು ಜರುಗಿಸಿರುವುದಿಲ್ಲ ಮತ್ತು ಟ್ರಾಕ್ಟರ್ ಸಂಖ್ಯೆಃ ಎಪಿ 16 ಟಿ 9468 ಮತ್ತು ಟ್ರಾಲಿ ಸಂಖ್ಯೆಃ ಎಪಿ 16 ಟಿ 8486 ಮತ್ತು ಆಟೋ ರಿಕ್ಷ ಸಂಖ್ಯೆಃ ಎಪಿ 39 ಟಿ ಇ 2145 ನೇದವುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ನಂತರ ನಾನು ಸದರಿ ಮಹಜರಿಗೆ ಸಂಬಂಧಿಸಿದಂತೆ ಪಿರ್ಯಾದಿಯ ಯಾವುದೇ ಮರು ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ ಮತ್ತು ನಾನು ಶ್ರೀನಿವಾಸಪುರ ಸರ್ಕಾರಿ ಆಸ್ಪತ್ರೆಗೆ ಶವವನ್ನು ಸಾಗಿಸಿ ಪಂಚರ ಸಮಕ್ಷಮ ಶವಪಂಚನಾಮೆ ಜರುಗಿಸಿವುದಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ.8 ಮತ್ತು 9 ನ್ನು ಆರೋಪಿಗೆ ತೊಂದರೆ ಕೊಡುವ ಸಲುವಾಗಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ನಾನು ನಿಪಿ.1 ಮತ್ತು 2 ನ್ನು ಠಾಣೆಯಲ್ಲೇ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಆರೋಪಿಯು ತನ್ನ ವಾಹನವನ್ನು ಅತೀ ವೇಗ ಮತ್ತು ಅಜಾಗರುಕತೆಯಿಂದ ಚಲಾಯಿಸಿರುವುದಿಲ್ಲ ಮತ್ತು ಯಾವುದೇ ಅಪಘಾತ ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದೂರಿನ ಆಧಾರದ ಮೇಲೆ ಸುಳ್ಳು ಮೊಕದಮ್ಮೆ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಲಾಯಿತು.
ಓದಿ ಹೇಳಿ ಕೇಳಿ ಸರಿಯಾಗಿದೆ.

(ಸಚಿನ್ ಹೆಚ್ . ಆರ್.)
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಶ್ರೀನಿವಾಸಪುರ